## ಧಾರವಾಡದ ಸಂಸ್ಕೃತ ಪಾಠಶಾಲೆ

# ಸಂಸ್ಕೃತ ಜಿಜ್ಞಾಸುಗಳ ಅಕ್ಷಯಪಾತ್ರೆ

ಧಾರವಾಡದ ಸಾಂಸ್ಕೃತಿಕ ಮಹತ್ವದ ಸಂಸ್ಥೆಗಳಲ್ಲಿ 'ಸಂಸ್ಕೃತ ಪಾಠಶಾಲೆ'ಯೂ ಒಂದು. ಭಾರತೀಯ ಪರಂಪರೆಯ ಕೊಂಡಿಯಾಗಿ ಗುರ್ತಿಸಿಕೊಂಡಿರುವ ಈ ಸಂಸ್ಥೆಯ ಕಟ್ಟಡ ವಾಸ್ತುಶಿಲ್ಪದ ಕಾರಣದಿಂದಲೂ ಗಮನಾರ್ಹ. 132 ವರ್ಷಗಳಷ್ಟು ಪುರಾತನವಾದ ಸಂಸ್ಥೆ, ಸಂಸ್ಕೃತದ ಜಿಜ್ಞಾಸುಗಳ ಪಾಲಿಗೆ ಅಕ್ಷಯಪಾತ್ರೆಯಂತಿದೆ.

■ ಮಾಲತಿ ಪಟ್ಟಣಶೆಟ್ಟಿ

ಚಿತ್ರಗಳು: ಬಿ.ಎಂ. ಕೇದಾರನಾಥ




ನಮಗಾಗಿ ಚೆಂದದ ಮನೆಯನ್ನು ಬಳುವಳಿಯಾಗಿ ಕೊಟ್ಟ ಹಿರಿಯರನ್ನು ನೆನೆಯುತ್ತೇವಲ್ಲ; ಹಾಗೆಯೇ ಧಾರವಾಡದಲ್ಲಿ ಮುಂಬರುವ ಪೀಳಿಗೆಯು ಎದೆ ತಟ್ಟಿಕೊಂಡು 'ಇವು ನಮ್ಮೂರಿನಲ್ಲಿವೆ' ಎಂದು ಹೆಮ್ಮೆಪಡುವ ಕೆಲವು ಅಪ್ರತಿಮ ಸಂಸ್ಥೆಗಳಿವೆ. ಅಂಥ ಕೆಲವು ಸಂಸ್ಥೆಗಳು: ಕರ್ನಾಟಕ ವಿಶ್ವವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯ, ಕರ್ನಾಟಕ ಕಾಲೇಜು, ಗಂಡು ಮಕ್ಕಳ ಟ್ರೇನಿಂಗ್ ಕಾಲೇಜು, ಬೇಂದ್ರೆ ಭವನ, ಮುರುಘಾಮಠ ಮತ್ತು ಸಂಸ್ಕೃತ ಪಾಠಶಾಲೆ.

ಸದ್ದು ಗದ್ದಲವಿಲ್ಲದೆ ಮೌನದಲ್ಲಿ ಜ್ಞಾನ ಸಮಾರಾಧನೆ ನಡೆಸುತ್ತಿರುವ ಧಾರವಾಡದ ಸಂಸ್ಕೃತ ಪಾಠಶಾಲೆಯು ಒಂದು ನೂರಾ ಮುವತ್ತೆರಡು ವರ್ಷಗಳಷ್ಟು ಪುರಾತನ ಸಂಸ್ಥೆ! ಐದು ಅಂತಸ್ತಿನ, ವರ್ಣರಂಜಿತವಾಗಿದ್ದ ಈ ಭವ್ಯ ಕಟ್ಟಡವನ್ನು ಕೆಳಗೆ ನಿಂತು ಮುಗಿಲೆತ್ತಕ್ಕೆ ಕಣ್ಣೇರಿಸಿ, ಹುಬ್ಬೇರಿಸಿ ನೋಡಿದಾಗ ಕಟ್ಟಡದ ವಿನ್ಯಾಸವು ಯಾರನ್ನಾದರೂ ಬೆರಗುಗೊಳಿಸದೆ ಇರಲಾರದು. ಕಲಾತ್ಮಕ ಚೌಕಟ್ಟುಗಳಿದ್ದ ಕಿಟಕಿ, ಬಾಗಿಲುಗಳೊಳಗೆ ಅಳವಡಿಸಲಾದ ಬಣ್ಣ ಬಣ್ಣದ ಗಾಜಿನ ವಿನ್ಯಾಸಗಳು ನಮ್ಮ ಪೂರ್ವಜರ ಸೌಂದರ್ಯಪ್ರಜ್ಞೆಗೆ ಸಾಕ್ಷಿರೂಪದಲ್ಲಿವೆ.

ಊರ ಹೃದಯಭಾಗದಲ್ಲಿ ತಲೆಎತ್ತಿ ನಿಂತ ಈ ಕಟ್ಟಡವು ತನ್ನ ಪ್ರತಿಬಿಂಬವನ್ನು ಹಿಂದಿರುವ ಹಾಲಗೆರೆಕೆರೆಯಲ್ಲಿ ಇಣುಕಿ ನೋಡಿಕೊಳ್ಳುತ್ತ ನಾಚುತ್ತಿತ್ತು! ಆದರೆ ಈ ಕೆರೆಯ ನೀರನ್ನು ಬತ್ತಿಸಿ ಒಂದು ಸೂಪರ್ ಮಾರ್ಕೆಟ್ಟನ್ನು ನಿರ್ಮಿಸಿದ ಹಿಂದಿನ ಮುನ್ಸಿಪಾಲಿಟಿಯ ಅಧಿಕಾರಿಗಳನ್ನು ಊರ ಜನರು ಇಂದಿಗೂ ಶಪಿಸುತ್ತಿರುತ್ತಾರೆ. ಊರ ಮಧ್ಯದ ಕೆರೆಯೆಂದರೆ ಆ ಊರಿನ ಕಿರೀಟದಲ್ಲಿದ್ದ ನೀಲ ವಜ್ರದಂತೆ ಮೌಲಿಕವಾದದ್ದು!

ಐದಂತಸ್ತಿನ ಸಂಸ್ಕೃತ ಪಾಠಶಾಲೆಯು ನಿರ್ಮಾಣವಾದಾಗ ಧಾರವಾಡದಲ್ಲಿಯ ಬಹುತೇಕ ಮನೆಗಳಿಗೆ ಎರಡನೆಯ ಅಂತಸ್ತು ಸಹ ಇರಲಿಲ್ಲ. ಆದ್ದರಿಂದ ಈ ಊರಿಗೆ ಬಂದ ಅತಿಥಿಗಳನ್ನು ನಮ್ಮ ಹಿರಿಯರು ಕರೆದೊಯ್ದು ಐದಂತಸ್ತಿನ ಈ ಕಟ್ಟಡವನ್ನು ತೋರಿಸುತ್ತ ಹೆಮ್ಮೆಪಡುತ್ತಿದ್ದರು. ಇಂದಿಗೂ ಇದು ಪ್ರೇಕ್ಷಣೀಯ ಕಟ್ಟಡವೇ.

'ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆ'ಗೆ ಅಡಿಗಲ್ಲು ಇಟ್ಟವರು ಶೃಂಗೇರಿಯ ಪೀಠಾಧೀಶ್ವರ ಸಚ್ಚಿದಾನಂದ ಶಿವಾನುಭವ ನೃಸಿಂಹಭಾರತೀ ಮಹಾಸ್ವಾಮಿಗಳವರು. ಈ ಸಂಸ್ಥೆಯ ಕನಸನ್ನು ಕಂಡು ಸಾಕಾರಗೊಳಿಸಿದ, ಇದರ ಉತ್ಕರ್ಷಕ್ಕೆ ಕಾರಣೀಭೂತರೂ, ಅಪ್ರತಿಮ ಸೇವಾಭಾವದವರೂ ಆಗಿದ್ದ ಚಿರಸ್ಮರಣೀಯರಾದ ಪಾಠಕ್ ಗುರುನಾಥರಾಯರು. ಇವರು ಇದ್ದುದೇ ನಮ್ಮೂರಿನ ಪುಣ್ಯ ಎಂದೆನ್ನಬೇಕು. ಇವರ ಕನಸು